**<u>ಸಾಕ್ಷಿಯನ್ನು ದಿಃ 15.12.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲುಃ 2 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ ಬಿ .ಸಿ. ಎಸ್ ವಕೀಲರಿಂದ.</u>**

ನನಗೂ ಮತ್ತು ನನ್ನ ತಂದೆಗೆ ಈ ದಾವೆಯ ಬಗ್ಗೆ ಪೂರ್ತಿಮಾಹಿತಿ ಇದೆ. ಈ ದಾವೆಯಲ್ಲಿ 14 ಅಸ್ತಿಗಳನ್ನು ಸೇರಿಸಲಾಗಿದೆ. ದಾವಾದ ಎಲ್ಲಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ 2006 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಅವರ ಜೀವಿತ ಅವಧಿಯಲ್ಲಿ ದಾವಾ ಆಸ್ತಿಗಳಲ್ಲಿ ಭಾಗ ಕೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಯು ಅವರ ತಂದೆಗೆ ಭಾಗಾಂಶ ಕೇಳಿದ್ದರು. ನನ್ನ ತಾಯಿಯು ತಮ್ಮ ಜೀವಿತ ಅವಧಿಯಲ್ಲಿ ಭಾಗ ಕೇಳಿ ವಕೀಲರ ಮೂಲ ನೋಟೀಸ್ ಆಗಲೀ ಅಥವಾ ದಾವೆಯನ್ನು ಅವರು ಹೂಡಿರಲಿಲ್ಲ. ನನ್ನ ತಾಯಿಯು ಒಟ್ಟು ಕುಟುಂಬದಲ್ಲಿ ದಾವಾ ಆಸ್ತಿಗಳನ್ನು ಉಳುಮೆ ಮಾಡುವುದನ್ನು ಮಾಡಿಲ್ಲ ಎಂದರೆ ಸರಿ.

ದಾವಾ ಆಸ್ತಿಗಳು ನಮ್ಮ ತಾಯಿಯ ತಂದೆಗೆ ಭಾಗದ ಮೂಲಕ ಬಂದಿರುತ್ತವೆ. ಸದರಿ ಪಾಲುವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಸದರಿ ಪಾಲುವಿಭಾಗ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಈ ದಾವೆಯಲ್ಲಿ 2 ರಿಂದ 4 ನೇ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿಲ್ಲ. ದಾವಾ ಆಸ್ತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ, 1 ನೇ ವಾದಿಯು ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸೈಟ್ ನಂಬರ್ 107 ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ.ಸದರಿ ಆಸ್ತಿಯನ್ನು ನನ್ನ ತಾಯಿಯ ಹೆಸರಿನಲ್ಲಿ ಖರೀದಿ ಮಾಡಲು 1 ನೇ ಪ್ರತಿವಾದಿ ಹಣ ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ಆಸ್ತಿಯನ್ನು ನನ್ನ ತಂದೆ ವಿ ಅರ್ ಎಸ್ ನಿಂದ ಬಂದ ಹಣದಿಂದ ತೆಗೆದು ಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು 2000 ನೇ ಇಸವಿಯಲ್ಲಿ ಖರೀದಿ ಮಾಡಲಾಗಿದೆ. ಸದರಿ ಆಸ್ತಿಯಲ್ಲಿ ಈಗ 3 ಅಂತಸ್ಥಿನ ವಾಸದ ಮನೆ ಇದೆ. ಮೊದಲಿಗೆ ಒಂದು ಅಂತಸ್ತಿನ ಮನೆ ಇತ್ತು ಈಗ 2 ಮತ್ತು 3 ನೇ ಅಂತಸ್ತಿನ ಮನೆಯನ್ನು ನಾನು ನಿರ್ಮಿಸುತ್ತಿದೆದೇನೆ. ನಾನಾಗಲೀ ಮತ್ತು ನನ್ನ ತಂದೆಯಾಗಲೀ ಸದರಿ ಆಸ್ತಿಯನ್ನು ನಮ್ಮ ಸ್ವಯಾರ್ಜಿತ ಆಸ್ತಿ ಎಂದರೆ ಆದಾಯ ತೆರಿಗೆಯಲ್ಲಿ ಘೋಷಣೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸೈಟ್ ನಂಬರ್ 107 ರಲ್ಲಿ

ಇರುವ ಮನೆಯನ್ನು ನಿರ್ಮಿಸುವ ಕಾಲಕ್ಕೆ ನನ್ನ ಬಳಿ ಅಥವಾ 1 ನೇ ವಾದಿಯ ಬಳಿ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವು ಲೋನ್ ಮಾಡಿ ಸದರಿ ಮನೆಯನ್ನು ನಿರ್ಮಿಸಿರುತ್ತೇವೆ ಎಂದು ನುಡಿಯುತ್ತಾರೆ. ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಮಾಡಿಲ್ಲ ಮುಂದೆ ಹಾಜರು ಮಾಡುತ್ತೇನೆ.

2 ನೇ ಪ್ರತಿವಾದಿಯು ಬಿರ್ಲಾಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. 3 ನೇ ಪ್ರತಿವಾದಿ ಸಹ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು 3 ನೇ ಪ್ರತಿವಾದಿ ಈಗ ಏನು ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಮಾರಣ ಹೊಂದಿದ ನಂತರ 2 ರಿಂದ 4 ನೇ ಪ್ರತಿವಾದಿಗಳ ಕುಟುಂಬದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಮರಣ ಹೊಂದಿದ ನಂತರ 2 ವರ್ಷಗಳ ಮಟ್ಟಿಗೆ ಹೋಗುತ್ತಿದ್ದೆವು. ನಂತರ ನಾವು ಪ್ರತಿವಾದಿಗಳ ಸಂಪರ್ಕದಲ್ಲಿ ಇಲ್ಲ. 2 ನೇ ಪ್ರತಿವಾದಿಯು ನಾನು ಮತ್ತು ನನ್ನ ತಂದೆ ಕೊಟ್ಟ ಕಿರುಕುಳದಿಂದ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ರಾಮಯ್ಯ ಮರಣ ಹೊಂದಲು ನಾವೇ ಕಾರಣ ಎಂದು ಒಂದು ಎಫ್ ಐ ಆರ್ ರಿಜಿಸ್ಟರ್ ಆಗಿದ್ದು ಆ ಸಂಬಂಧ ಒಂದು ಕ್ರಿಮಿನಲ್ ಪ್ರಕರಣ ಸಹ ಚಾಲ್ತಿ ಇದೆ ಎಂದರೆ ಸರಿ. ಆ ಪ್ರಕರಣದಲ್ಲಿ ನಾವು ಬೇಲ್ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಸದರಿ ಪ್ರಕರಣದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ದಾವಾ ಸ್ವತ್ತಿನ ಆಸ್ತಿಗೆ ಸಂಬಂಧಿಸಿದಂತೆ ಈಗಾಗಲೇ ವಿಭಾಗ ಆಗಿದೆ ಎಂದರೆ ಸರಿಯಲ್ಲ. ದಿನಾಂಕ 18-05-2011 ರ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಮತ್ತು ಯಾವುದೇ ವಿಭಾಗ ಆಗಿಲ್ಲ. ಸದರಿ ವಿಭಾಗ ಪತ್ರವು ಆಗುವುದಕ್ಕಿಂತ ಮೊದಲು 1 ಮತ್ತು 2 ನೇ ಪ್ರತಿವಾದಿಗಳ ಮಧ್ಯೆ 1999 ರಲ್ಲಿ ಮೌಖಿಕ ವಿಭಾಗ ಅಗಿತ್ತು ಎಂದರೆ ಸರಿಯಲ್ಲ.

ನಿಪಿ-14 ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಿಪಿ-14 ದಾಖಲೆ ಆಗಿರುವುದು ನನ್ನ ಗಮನದಲ್ಲೇ ಇಲ್ಲ. ನಿಪಿ-14 ರ ಪ್ರಕಾರ ದಾವಾ ಆಸ್ತಿಗಳು ಈಗಾಗಲೇ ವಿಭಾಗ ಆಗಿದ್ದು, ವಿಭಾಗದ ಆಧಾರದ ಮೇಲೆ ಖಾತೆ , ಪಹಣಿ ಆಗಿರುತ್ತವೆ ಎಂದರೆ ಸಾಕ್ಷಿಯು ನಮ್ಮ ಗಮನಕ್ಕೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಸಲ್ಲಿಸಿದ ದಾಖಲೆಗಳನ್ನು ನಾನು ಮತ್ತು ನನ್ನ ತಂದೆ ಸೇರಿ ತೆಗೆದುಕೊಂಡಿರುತ್ತೇವೆ. 2011 ರಲ್ಲಿ 1 ಮತ್ತು 2 ನೇ ಪ್ರತಿವಾದಿಗಳ ಮಧ್ಯೆ ಆಗಿರುವ ವಿಭಾಗದ ಬಗ್ಗೆ 1 ನೇ ವಾದಿಗೆ ಗೊತ್ತು ಎಂದರೆ

ಸರಿಯಲ್ಲ. ನಿಪಿ-14 ರ ವಿವರಗಳನ್ನು ಈ ದಾವೆಯಲ್ಲಿ ಅಥವಾ ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸಾಕ್ಷಿ ಭಾಗ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾವಾ ಆಸ್ತಿಗಳು ಯಾರ ಹೆಸರಿನಲ್ಲಿ ಇವೆ ಎಂದು ಪಹಣಿ ನೋಡಿರುತ್ತೇವೆ. ನಿಪಿ-14 ನ್ನು ಸಹ ನಾನು ಓದಿರುತ್ತೇನೆ. ನಿಪಿ-14 ರಲ್ಲಿ ವಿವರಿಸಿರುವ 2011 ರ ವಿಭಾಗದ ಬಗ್ಗೆ ಈ ದಾವೆ ಸಲ್ಲಿಸುವ ಸಂದರ್ಬದಲ್ಲಿ ಗೊತ್ತಾಯಿತು. ಈ ವಿಚಾರವನ್ನು ನಮ್ಮ ವಕೀಲರಿಗೆ ತಿಳಿಸಿರುತ್ತೇವೆ. ನನ್ನ ವಾದ ಪತ್ರಕ್ಕೆ ಸಹಿ ಮಾಡುವಾಗ ಪೂರ್ತಿ ಓದಿರುತ್ತೇನೆ. ವಾದ ಪತ್ರದಲ್ಲಿ 2011 ರ ವಿಭಾಗ ಪತ್ರದ ಬಗ್ಗೆ ನಮೂದು ಆಗಿದೆಯೋ ಇಲ್ಲವೋ ಎಂದು ನೆನಪಿಗೆ ಬರುತ್ತಿಲ್ಲ. ನಿಪಿ- 1 ರಿಂದ ನಿಪಿ-18 ದಾಖಲೆಗಳನ್ನು ನಾನು ಓದಿಲ್ಲ ಎಂದರೆ ಸರಿಯಲ್ಲ. ನಿಪಿ-14 ರಲ್ಲಿ ನಮೂದು ಮಾಡಿರುವ ವಿಭಾಗದಂತೆ 1 ಮತ್ತು 2 ನೇ ಪ್ರತಿವಾದಿಗಳು ಭಾಗ ಮಾಡಿಕೊಂಡು ಪ್ರತ್ಯೇಕ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ನಮ್ಮ ತಾಯಿ ಮರಣ ಹೊಂದಿ 1 ವರ್ಷದ ನಂತರ ದಾವಾ ಆಸ್ತಿಯಲ್ಲಿ ನಮಗೆ ಭಾಗ ಕೊಡಿ ಎಂದು 1 ನೇ ಪ್ರತಿವಾದಿಯನ್ನು ಕೇಳಿರುತ್ತೇವೆ. ಆಗ 1 ನೇ ಪ್ರತಿವಾದಿಯು ಮುಂದೆ ಕೊಡುತ್ತೇವೆ ಎಂದು ಹೇಳಿರುತ್ತಾರೆ.

**(ಮುಂದುವರಿದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.